## ‘ಅಟುಳ’

ಸಂಜೆ ಹಾಲು–ಬಿಸ್ಕತ್ ತಿಂದು ಹೋಂವರ್ಕ್ ಮಾಡಲು ಕುಳಿತ ಪಕ್ಕದ ಮನೆಯ ಪುಟ್ಟುಗೆ ‘ಅಟುಳ’ ಹೇಗೆ ಬರೆಯುವುದು ಗೊತ್ತಾಗಲಿಲ್ಲ. ತನ್ನ ಅಮ್ಮನಿಗೆ ಕೇಳಿದ, ಅವಳಿಗೂ ಅರ್ಥವಾಗಲಿಲ್ಲ. ಪಕ್ಕದ ಮನೆ ಪದ್ಮಾಗೆ ಕೇಳಿದರು. ಅವರಿಗೂ ಗೊತ್ತಿಲ್ಲ. ನಮ್ಮ ಮನೆಗೆ ಬಂದರು, ನನಗೂ ತಿಳಿಯಲಿಲ್ಲ. ಸಂಜೆ ಅವರಪ್ಪ ಬಂದ ಮೇಲೆ ಅವರಮ್ಮ, ‘ರೀ, ಪುಟ್ಟುಗೆ ಅದೇನೊ ಹೋಂವರ್ಕ್ ಹೇಳಿದ್ದಾರೆ. ನನಗೆ ಅದೇನು ಅಂತ ಗೊತ್ತಾಗಲಿಲ್ಲ’ ಅಂದರು. ಅಪ್ಪನನ್ನು ಕೇಳಿದ ಪುಟ್ಟು, ‘ಅಟುಳ ಹೇಗೆ ಬರೆಯೋದಪ್ಪ?’ ಎಂದು. ‘ಅದೇನೊ ಅಟುಳ... ನನಗೂ ಗೊತ್ತಿಲ್ಲವಲ್ಲ’ ಎಂದ ಅಪ್ಪ ತನ್ನ ಸ್ನೇಹಿತರಿಗೆಲ್ಲಾ ಫೋನ್ ಮಾಡಿ ಕೇಳಿದ. ಯಾರಿಗೂ ಗೊತ್ತಿಲ್ಲ. ಕೊನೆಗೆ ಅವರ ಟೀಚರ್‌ಗೆ ಫೋನ್ ಹೋಯ್ತು. ‘ಅಯ್ಯೊ ನಿಮ್ಮನೆಯಲ್ಲಿ ಯಾರಿಗೂ ಅಟುಳ ಗೊತ್ತಿಲ್ಲವಾ? ಅಮ್ಮಅಪ್ಪ ಬಿಎಸ್ಸಿ–ಎಮ್ಮೆಸ್ಸಿ ಅಂತೀರಾ? ‘ಅ ಯಿಂದ ಳ’ ವರೆಗೂ, ಅಂದರೆ ‘ಅ to ಳ’ ಹೇಗೆ ಬರೆಯೋದು ಗೊತ್ತಿಲ್ವಾ?’ ಎಂದಾಗ ಎಲ್ಲರೂ ಬೆಪ್ಪಾದರು.

**ಜ್ಯೋತಿ ಪರಬತ್**





ಕಲೆ: ಗಣೇಶ ಆಚಾರ್ಯ

## ಒಂದು ಹುಡುಗಿ ಕೊಡಿ!

ದಕ್ಷಿಣ ಕನ್ನಡ ಜಿಲ್ಲೆಯ ನಮ್ಮ ಪರಿಚಯದ ಯುವಕನೊಬ್ಬ ಬಸ್ ಕಂಡಕ್ಟರ್ ಉದ್ಯೋಗಕ್ಕೆ ಆಯ್ಕೆಯಾಗಿದ್ದ. ಅವನನ್ನು ಬೀದರ್ ಜಿಲ್ಲೆಯ ಡಿಪೋಕ್ಕೆ ನೇಮಿಸಿದ್ದರು. ಒಂದು ದಿವಸ ಪ್ರಯಾಣಿಕನೊಬ್ಬ, ಬಸ್ಸಿನಲ್ಲಿ ಕಂಡಕ್ಟರನಿಗೆ ಹಣ ಕೊಡುತ್ತಾ, ‘ಒಂದು ಹುಡುಗಿ ಕೊಡಿ’ ಅಂದಿದ್ದಾನೆ. ಅದನ್ನು ಕೇಳಿದ ಕಂಡಕ್ಟರ್ ಹುಡುಗ ಕಕ್ಕಾಬಿಕ್ಕಿಯಾಗಿದ್ದಾನೆ! ಕಂಡಕ್ಟರ್‌ನ ಆತಂಕವನ್ನು ಅರಿತ ಇನ್ನೊಬ್ಬ ಪ್ರಯಾಣಿಕ, ‘ಸರ್, ಗಾಬರಿಯಾಗಬೇಡಿ! ಇದೇ ಮಾರ್ಗದಲ್ಲಿ ಮುಂದೆ ಹುಡುಗಿ ಅಂತ ಒಂದೂರಿದೆ. ಅವನು ಅಲ್ಲಿಗೆ, ಟಿಕೆಟ್ ಕೇಳ್ತಿದ್ದಾನೆ’ ಎಂದು ವಿವರಿಸಿದ ಮೇಲೆಯೇ ಕಂಡಕ್ಟರನಿಗೆ ಸಮಾಧಾನವಾಗಿ ಟಿಕೆಟ್ ಕೊಟ್ಟಿದ್ದು.

**ಕೆ.ಜಿ. ಭದ್ರಣ್ಣವರ**